ಇನ್ನು ಸುಮ್ಮನೆ ಆಡುವ ಮಾತಿಗೆ ಗ್ರಾಸವಾಗದಂತೆ ಹೀಗೊಂದು ಕಾಟಾಚಾರದ ಜಾಹೀರಾತು ಕೊಟ್ಟಿರಬಹುದೆ? ಛೇ, ಅಸಂಬದ್ಧ ಲಹರಿ... ಆತ ಯಾರೋ ಏನೋ ನನಗ್ಯಾಕೆ ಎಂದು ಪುಟ ತಿರುವಿದೆ.

★★★

'ಮಗಳಿಗೆ ಪರೀಕ್ಷೆ, ಪಾಠ ಹೇಳಿಕೊಡೋಕ್ಕೆ ಬರೋದಿಲ್ಲ ಆದರೂ ಪಕ್ಕದಲ್ಲಿದ್ದು ಸ್ವಲ್ಪ ಕಾಳಜಿ ಮಾಡಬೇಕು, ಅಕ್ಕ. ಒಂದು ವಾರ ಬರೋಲ್ಲ. ಮುಂದಿನ ಸೋಮವಾರ ಕೊನೆಯ ಪೇಪರ್, ಮಂಗಳವಾರ ಬರ್ತೀನಕ್ಕ' ಚಂದ್ರಿ ಕೇಳಿದ್ದರಿಂದ, ವಾರದಿಂದ ನನ್ನದೇ ಕೆಲಸ.

ಇರುವುದು ಒಬ್ಬಳೇ ಆದರೂ ಬೆಳಗಿನ ಕಸ ಗುಡಿಸಬೇಕು, ಕಾಫಿ, ತಿಂಡಿ, ಅಡುಗೆಪಾತ್ರೆ

